# ಆತಿಥ್ಯ



ಹಸನ್ ಎಂಬವನು ತನ್ನ ಮಡದಿಯೊಂದಿಗೆ ಬಲು ಚಿಕ್ಕ ಮನೆಯಲ್ಲಿ ವಾಸವಾಗಿದ್ದನು. ಒಂದು ಮಳೆಗಾಲದಲ್ಲಿ ನಡುರಾತ್ರಿಯಲ್ಲಿ ಜೋರು ಮಳೆ ಸುರಿಯುತ್ತಿತ್ತು. ಆಗ ಅಪರಿಚಿತನೊಬ್ಬನು ಮಳೆಯಲ್ಲಿ ನೆನೆದು, ಚಳಿಯಲ್ಲಿ ನಡುಗುತ್ತಾ ಬಂದು ಹಸನ್‌ನ ಮನೆಯ ಬಾಗಿಲು ತಟ್ಟಿ ಆಸರೆ ಕೊಡಬೇಕೆಂದು ಬೇಡಿಕೊಂಡನು. ಆಗ ಹಸನ್‌ನ ಹೆಂಡತಿ, ‘ಇಲ್ಲಿ ನಮಗೇ ಮಲಗಲು ಜಾಗವಿಲ್ಲ. ಅವನನ್ನು ಹೇಗೆ ಸೇರಿಸಿಕೊಳ್ಳುವುದು’ ಎಂದು ಹೇಳಿದಳು. ಆಗ ಹಸನ್, ‘ ಆತ ಮಳೆಯಲ್ಲಿ ನೆನೆದುಕೊಂಡು ಬಂದಿದ್ದಾನೆ. ಅವನಿಗೆ ಆಶ್ರಯ ಕೊಡುವುದು ಮಾನವ ಧರ್ಮ. ಇದ್ದ ಜಾಗದಲ್ಲಿ ಹೊಂದಾಣಿಕೆ ಮಾಡಿಕೊಳ್ಳೋಣ. ನಾನು ಎದ್ದು ಕುಳಿತರೆ ಆತನಿಗೆ ಜಾಗವಾಗುವುದು’ ಎಂದು ಮಡದಿಗೆ ಸಮಾಧಾನ ಹೇಳಿದನು.

ಸ್ವಲ್ಪ ಹೊತ್ತಿನ ನಂತರ ಇನ್ನೋರ್ವ ಅಪರಿಚಿತ ಮಳೆಯಲ್ಲಿ ನೆನೆದು ಬಂದು ಅದೇ ಮನೆಯ ಬಾಗಿಲು ಬಡಿದ. ಈಗ ಹಸನ್‌ನ ಮನೆಯ ಒಳಗೆ ಆಶ್ರಯ ಪಡೆದ ಮೊದಲನೇ ಅತಿಥಿ ಹೇಳಿದ ‘ನಾನೊಬ್ಬ ಇಲ್ಲಿ ಬಂದು ಸೇರಿಕೊಂಡಿದ್ದೇನೆ. ಇನ್ನೊಬ್ಬನನ್ನು ಸೇರಿಸಿಕೊಳ್ಳಲು ಜಾಗ ಎಲ್ಲಿದೆ?’ ಆಗ ಹಸನ್ ಎಂದ, ‘ಅದ್ಯಾಕೆ ಹಾಗೆ ಹೇಳುತ್ತೀ. ನೀನು ಬಂದಾಗ ನಾನು ನಿನಗೆ ಮನೆಯೊಳಗೆ ಸೇರಿಸಿಕೊಳ್ಳದಿದ್ದರೆ ನಿನಗೆ ಬೆಚ್ಚಗೆ ಇರಲು ಸಾಧ್ಯವಿತ್ತೆ? ಆತ ಒಳಗೆ ಬರಲಿ. ನಾವೆಲ್ಲರೂ ಕುಳಿತು ರಾತ್ರಿ ಕಳೆಯೋಣ. ಬಡವನ ಮನೆ, ಮನ ಯಾವತ್ತೂ ಚಿಕ್ಕದಾಗುವುದಿಲ್ಲ. ಅದು ದೊಡ್ಡದಾಗುತ್ತಲೇ ಹೋಗುತ್ತದೆ.’ ಹಸನ್ ಎರಡನೆಯ ಅತಿಥಿಯನ್ನೂ ಮನೆಯ ಒಳಗೆ ಕರೆದನು.

ಮಧ್ಯ ರಾತ್ರಿ ಮಳೆ ಸುರಿಯುತ್ತಲೇ ಇತ್ತು. ಅಷ್ಟರಲ್ಲಿ ಒಂದು ಕತ್ತೆಮರಿ ಮಳೆಯಲ್ಲಿ ನೆನೆದು ಅರುಚುತ್ತಾ ಮನೆಯ ಹತ್ತಿರ ಬಂದಿತು. ‘ಪಾಪ ಮೂಕಪ್ರಾಣಿ. ಚಳಿಯಿಂದ ನಡಗುತ್ತಿದೆ. ನಾವಾದರೂ ಬೆಚ್ಚಗಿದ್ದೇವೆ. ಅದಕ್ಕೂ ಮನೆಯ ಒಳಗೆ ಸ್ವಲ್ಪ ಆಶ್ರಯ ಕೊಡೋಣ’ ಎಂದು ಹಸನ್ ಹೇಳಿದಾಗ ಮೊದಲು ಬಂದ ಇಬ್ಬರು ಅತಿಥಿಗಳೂ ಆ ಕತ್ತೆಯನ್ನು ಮನೆಯೊಳಗೆ ಸೇರಿಸಿಕೊಳ್ಳಬೇಕೆ? ಎಂದು ಗೊಣಗತೊಡಗಿದರು. ಆಗ ಹಸನ್ ‘ಇದು ಬಡವನ ಮನೆ. ಇಲ್ಲಿ ಕತ್ತೆಯನ್ನೂ ಮನುಷ್ಯರಂತೆ ಉಪಚರಿಸಲಾಗುತ್ತದೆ. ಆದರೆ ಅನೇಕ ಶ್ರೀಮಂತರ ಮನೆಯಲ್ಲಿ ಮನುಷ್ಯರನ್ನು ಕತ್ತೆಗಿಂತಲೂ ಕಡೆಯಾಗಿ ನೋಡುತ್ತಾರೆ’ ಎಂದನು. ಹೀಗೆಯೇ ಕಷ್ಟದಲ್ಲಿರುವ ಮನುಷ್ಯರಿಗೂ, ಪ್ರಾಣಿಗೂ ಮನೆಯಲ್ಲಿ ಆಶ್ರಯ ನೀಡಿ ಗಂಡ ಹೆಂಡತಿ ಮನೆಯ ಹೊರಗೆ ನಿಂತು ರಾತ್ರಿ ಕಳೆದರು. ಆಪತ್ಕಾಲದಲ್ಲಿದ್ದ ಅತಿಥಿಗಳನ್ನು ರಕ್ಷಿಸಿದೆವೆಂಬ ಆತ್ಮತೃಪ್ತಿ ಇಬ್ಬರಿಗೂ ಉಂಟಾಯಿತು.

ನೆಂಟರಿಷ್ಟರೆನಿಸಿಕೊಂಡವರು ಬಂದಾಗ ಅವರನ್ನು ಉಪಚರಿಸುವುದು ಮಾತ್ರ ಆತಿಥ್ಯವಲ್ಲ. ಇನ್ನೊಬ್ಬರ ಕಷ್ಟವನ್ನರಿತು ಸಹಾಯವನ್ನು ಮಾಡುವ ಕೆಲಸ ಆತಿಥ್ಯವೆನಿಸಿಕೊಳ್ಳುತ್ತದೆ.

**-ಎಸ್. ಜಯಶ್ರೀ ಶೆಣೈ,**
**ಬಂಟ್ವಾಳ**

# ಗುಬ್ಬಿ ಗುಬ್ಬಿ



ಗುಬ್ಬಿ ಗುಬ್ಬಿ ಪುಟಾಣಿ ಗುಬ್ಬಿ
ಎಲ್ಲಿ ಅವಿತು ಕುಳಿತಿರುವೆ
ಬೆಳಗಾಗೆದ್ದು ನಿನ್ನನು ಕಾಣಲು
ಕಾತರದಿಂದ ಕಾಯ್ದಿರುವೆ

ಹುಲ್ಲುಕಡ್ಡಿ ಚೆಂದದಿ ಸೇರಿಸಿ
ಸುಂದರ ಗೂಡನು ರಚಿಸಿರುವೆ
ಸೂಜಿ ಇಲ್ಲ ದಾರವು ಇಲ್ಲ
ಹೇಗೆ ಅದನು ಹೆಣೆದಿರುವೆ

ಬಿಸಿಲಿಗೆ ಕಾಯದು ಮಳೆಯಲಿ ನೆನೆಯದು
ಎಂಥ ಕೌಶಲ ಮೆರೆದಿರುವೆ
ಮೊಟ್ಟೆಯನಿಟ್ಟು ಮರಿಗಳ ಮಾಡಿ
ಗುಟುಕನು ಕೊಟ್ಟು ಬೆಳೆಸಿರುವೆ

ಚಿಂವ್ ಚಿಂವ್ ಗುಟ್ಟುತ ಬೆಳಸಿಯ ತಿನ್ನುತ
ಹರುಷದಿ ಸಮಯವ ಕಳೆಯುತಿಹೆ
ಬಳಗದ ಜೊತೆಗೆ ಸುಖದಲಿ ಬಾಳುತ
ಮಾದರಿ ಬದುಕು ನಡೆಸಿರುವೆ.

**-ಆರ್.ಎಸ್. ಚಾಪಗಾವಿ, ಬೆಳಗಾವಿ**